# All India Radio: Bangalore
# National Bulletins In Kannada
# 20.07.2025 / 7.35 pm

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

<><*<><>*><>

ಮುಖ್ಯಾಂಶಗಳು

೧. ನಾಳೆಯಿಂದ ಸಂಸತ್ತಿನ ಮುಂಗಾರು ಅಧಿವೇಶನ ಆರಂಭ, ಸರ್ವಪಕ್ಷ ಸಭೆಯಲ್ಲಿಂದು ಮುಕ್ತ ಚರ್ಚೆ ನಡೆಸುವ ಭರವಸೆ ನೀಡಿದ ಕೇಂದ್ರ ಸರ್ಕಾರ

೨. ಬ್ರಿಟನ್ - ಮಾಲ್ಡೀವ್ಸ್ ರಾಷ್ಟ್ರಗಳಿಗೆ ಇದೇ ೨೩ ರಿಂದ ಪ್ರಧಾನಿ ನರೇಂದ್ರ ಮೋದಿ ಪ್ರವಾಸ; ದ್ವಿಪಕ್ಷೀಯ ಸಂಬಂಧಗಳ ಪ್ರಗತಿ ಪರಿಶೀಲನೆ ನಿರೀಕ್ಷೆ

೩. ಅಹಮದಾಬಾದ್ ವಿಮಾನ ದುರಂತ- ಪ್ರಾಥಾಮಿಕ ವರದಿಯನ್ನು ಆಧರಿಸಿ ಯಾವುದೇ ತೀರ್ಮಾನಕ್ಕೆ ಧಾವಿಸದಂತೆ ಸಚಿವ ರಾಮ್ ಮೋಹನ್ ನಾಯ್ಡು ಮನವಿ

೪. ಪೋರ್ಚ್‌ಗಲ್ ಅಥ್ಲೇಟಿಕ್ ಕ್ರೀಡಾಕೂಟ; ಲಾಂಗ್ ಜಂಪ್ ಸ್ಪರ್ಧೆಯಲ್ಲಿ ಭಾರತದ ಮುರುಳಿ ಶ್ರೀಶಂಕರ್ ಗೆ ಪ್ರಶಸ್ತಿ

><><><><><><><><><

ನಾಳೆ ಆರಂಭವಾಗಲಿರುವ ಸಂಸತ್ತಿನ ಮುಂಗಾರು ಅಧಿವೇಶನಕ್ಕೆ ಮುಂಚಿತವಾಗಿ, ಎರಡೂ ಸದನಗಳ ಸುಗಮ ಕಾರ್ಯನಿರ್ವಹಣೆಗೆ ಸರ್ಕಾರ ಇಂದು ಸರ್ವಪಕ್ಷ ಸಭೆಯನ್ನು ಕರೆದಿತ್ತು. ಲೋಕಸಭೆ ಮತ್ತು ರಾಜ್ಯಸಭೆಯನ್ನು ಪ್ರತಿನಿಧಿಸುವ ವಿವಿಧ ರಾಜಕೀಯ ಪಕ್ಷಗಳ ನಾಯಕರು ಸಭೆಯಲ್ಲಿ ಭಾಗವಹಿಸಿದ್ದರು. ಕೇಂದ್ರ ಸಚಿವ ಮತ್ತು ರಾಜ್ಯಸಭೆ ನಾಯಕ ಜಗತ್ ಪ್ರಕಾಶ್ ನಡ್ಡಾ ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು, ಸಂಸದೀಯ ವ್ಯವಹಾರಗಳ ರಾಜ್ಯ ಸಚಿವ ಅರ್ಜುನ್ ರಾಮ್ ಮೇಘವಾಲ್ ಮತ್ತು ಡಾ.ಎಲ್.ಮುರುಗನ್ ಉಪಸ್ಥಿತರಿದ್ದರು. ಜೊತೆಗೆ ಸಂಸದರಾದ ಕಾಂಗ್ರೆಸ್‌ನ ಗೌರವ್ ಗೊಗೊಯ್ ಮತ್ತು ಪ್ರಮೋದ್ ತಿವಾರಿ, ಎನ್‌ಸಿಪಿ-ಎಸ್‌ಸಿಪಿಯಿಂದ ಸುಪ್ರಿಯಾ ಸುಲೆ, ಡಿಎಂಕೆಯಿಂದ ತಿರುಚಿ ಶಿವ, ಸಮಾಜವಾದಿ ಪಕ್ಷದ ರಾಮ್ ಗೋಪಾಲ್ ಯಾದವ್, ಡಿಎಂಕೆಯಿಂದ ಟಿ.ಆರ್. ಬಾಲು ಮತ್ತು ಎಎಪಿಯಿಂದ ಸಂಜಯ್ ಸಿಂಗ್ ಸಭೆಯಲ್ಲಿ ಭಾಗವಹಿಸಿದ್ದರು. ಸಭೆಯ ನಂತರ ಮಾಧ್ಯಮಗಳೊಂದಿಗೆ ಮಾತನಾಡಿದ ಕೇಂದ್ರ ಸಚಿವ ಕಿರಣ್ ರಿಜಿಜು ಸಭೆ ತುಂಬಾ ರಚನಾತ್ಮಕವಾಗಿತ್ತು, ಸದನದ ನಾಯಕರು ತಮ್ಮ ಪಕ್ಷಗಳ ನಿಲುವು ಮತ್ತು ಅಧಿವೇಶನದಲ್ಲಿ ಚರ್ಚಿಸಲಾಗುವ ವಿಷಯಗಳನ್ನು ಮಂಡಿಸಿದರು. ಆಡಳಿತ ಪಕ್ಷ ಮತ್ತು ವಿರೋಧ ಪಕ್ಷಗಳೆರಡು ಉತ್ತಮ ಸಮನ್ವಯದಿಂದ ಒಟ್ಟಾಗಿ ಕೆಲಸ ಮಾಡಬೇಕು ಎಂದು ಹೇಳಿದರು. ಆಪರೇಷನ್ ಸಿಂಧೂರ್ ನಂತರ ಪ್ರಮುಖ ವಿಷಯಗಳ ಕುರಿತು ಸಂಸತ್ತಿನಲ್ಲಿ ಮುಕ್ತ ಚರ್ಚೆ ನಡೆಸಲು ಸರ್ಕಾರ ಸಿದ್ಧವಿದೆ. ಬಾರತ ಪಾಕಿಸ್ತಾನ ನಡುವೆ ಮಧ್ಯಸ್ಥಿಕೆ ಕುರಿತು ಅಮೆರಿಕಾ ಅಧ್ಯಕ್ಷ

ಟ್ರಂಪ್ ಅವರ ಹೇಳಿಕೆಗಳ ಕುರಿತು ಸರ್ಕಾರ ಸೂಕ್ತವಾಗಿ ಪ್ರತಿಕ್ರಿಯಿಸಲಿದೆ. ಜಸ್ಟೀಸ್ ವರ್ಮ ಮಹಾಭಿಯೋಗದ ಕುರಿತಂತೆ ಸರ್ಕಾರ ಅಲ್ಲಾ ಪಕ್ಷಗಳ ಅಭಿಪ್ರಾಯವನ್ನು ಪರಿಗಣಿಸಿ ಪ್ರಕ್ರಿಯೆಯನ್ನು ಮುಂದುವರೆಸಲಿದೆ ಎಂದು ಹೇಳಿದರು.

**ಧ್ವನಿ : ಕಿರಣ್ ರಿಜಿಜು, ( ೨೩ ಸೆಕೆಂಡುಗಳು)**

ಕಾಂಗ್ರೆಸ್ ನಾಯಕ ಗೌರವ ಗೊಗೊಯ್, ಅಧ್ಯಕ್ಷ ಟ್ರಂಪ್ ಹೇಳಿಕೆ, ಪಹಲ್ಗಾಮ್ ಭಯೋತ್ಪಾದಕ ದಾಳಿ ಹಾಗೂ ಬಿಹಾರದಲ್ಲಿ ವಿಶೇಷ ತೀವ್ರ ಪರಿಶೀಲನೆ ಕುರಿತಂತೆ ಸದನದಲ್ಲಿ ಪ್ರಧಾನ ಮಂತ್ರಿಗಳು ಹೇಳಿಕೆ ನೀಡುವಂತೆ ಆಗ್ರಹಿಸಿದರು. ಆರ್‌ಎಸ್‌ಪಿಯ ಸಂಸದ ಎನ್.ಕೆ.ಪ್ರೇಮ ಚಂದ್ರನ್, ಪಹಲ್ಗಾಮ್ ದಾಳಿ, ಆಪರೇಷನ್ ಸಿಂಧೂರ್ ಹಾಗೂ ಅಧ್ಯಕ್ಷ ಟ್ರಂಪ್ ಅವರ ಹೇಳಿಕೆ ಕುರಿತಂತೆ ಮುಕ್ತ ಚರ್ಚೆ ನಡೆಸಲು ಅವಕಾಶ ಮಾಡಿಕೊಡುವುದು ಎಲ್ಲಾ ವಿರೋಧ ಪಕ್ಷಗಳ ಬಯಕೆಯಾಗಿದೆ ಎಂದು ಹೇಳಿದ್ದಾರೆ.

**ಧ್ವನಿ : ಎನ್.ಕೆ.ಪ್ರೇಮ ಚಂದ್ರನ್, (೨೩ ಸೆಕೆಂಡುಗಳು)**

ಮುಂಗಾರು ಅಧಿವೇಶನ ನಾಳೆಯಿಂದ ಪ್ರಾರಂಭವಾಗಿ ಆಗಸ್ಟ್ ೨೧ ರವರೆಗೆ ನಡೆಯಲಿದ್ದು, ಎರಡೂ ಸದನಗಳ ಒಟ್ಟು ೨೧ ಅಧಿವೇಶನಗಳು ನಡೆಯಲಿವೆ. ಈ ವೇಳೆ ಜನ್‌ವಿಶ್ವಾಸ್ ಮಸೂದೆ ೨೦೨೫, ರಾಷ್ಟ್ರೀಯ ಕ್ರೀಡಾ ಆಡಳಿತ ಮಸೂದೆ ೨೦೨೫ ಮತ್ತು ಮರ್ಚೆಂಟ್ ಶಿಪ್ಪಿಂಗ್ ಮಸೂದೆ ೨೦೨೪ ಸೇರಿದಂತೆ ಪ್ರಮುಖ ಶಾಸನಗಳ ಕುರಿತಂತೆ ಚರ್ಚೆ ನಿರೀಕ್ಷಿಸಲಾಗಿದೆ.

><><><><><><><><><><

ಸಂಸತ್ತಿನ ಮುಂಗಾರು ಅಧಿವೇಶನ ನಾಳೆ ಆರಂಭವಾಗುತ್ತಿರುವ ಹಿನ್ನೆಲೆ ಶ್ರೋತೃಗಳಿಗಾಗಿ ಆಕಾಶವಾಣಿಯ ಸುದ್ದಿ ಸೇವೆಗಳ ವಿಭಾಗ "ಸಂಸದ್ ಕೆ ಸಮಕ್ಷ ಮುದ್ದೆ" ಎಂಬ ಕುರಿತು ವಿಶೇಷ ಚರ್ಚೆಗಳನ್ನು ಪ್ರಸಾರ ಮಾಡಲಿದೆ. ಸಂಸತ್ತಿನ ಎದುರಿರುವ ವಿಷಯಗಳು" ಕುರಿತ ಕಾರ್ಯಕ್ರಮವನ್ನು ಆಕಾಶವಾಣಿಯ ಕಾಮನಬಿಲ್ಲು ಮತ್ತು ಮತ್ತಿತ್ತರ ತರಂಗಾಂತರಗಳಲ್ಲಿ ಕೇಳಬಹುದು ಮತ್ತು ಈ ಕಾರ್ಯಕ್ರಮವನ್ನು ಇಂದು ರಾತ್ರಿ ೯.೩೦ ರಿಂದ ೧೦.೦೦ ರವರೆಗೆ ಆಕಾಶವಾಣಿಯ ಗೋಲ್ಡ್ ಮತ್ತು ಹೆಚ್ಚುವರಿ ತರಂಗಾಂತರಗಳಲ್ಲಿ ಕೇಳಬಹುದು. ಈ ಕಾರ್ಯಕ್ರಮವು ನಮ್ಮ ಜಾಲತಾಣ, ನ್ಯೂಸ್ ಆನ್ ಎರ್ ಡಾಟ್ ಜಿಒವಿ ಡಾಟ್ ಇನ್ ಮತ್ತು ನಮ್ಮ ಯೂಟ್ಯೂಬ್ ಚಾನೆಲ್ ನ್ಯೂಸ್ ಆನ್ ಎರ್ ಆಫೀಷಿಯಲ್‌ನಲ್ಲಿಯೂ ಲಭ್ಯವಿರುತ್ತದೆ.

><><><><><><><><><><

ಪ್ರಧಾನಿ ನರೇಂದ್ರ ಮೋದಿ ಇದೇ ೨೩ ರಿಂದ ೨೬ ರವರೆಗೆ ಬ್ರಿಟನ್ ಮತ್ತು ಮಾಲ್ಡೀವ್ಸ್ ರಾಷ್ಟ್ರಗಳಿಗೆ ಭೇಟಿ ನೀಡಲಿದ್ದಾರೆ. ಪ್ರವಾಸದ ಮೊದಲ ಚರಣದಲ್ಲಿ ಬ್ರಿಟನ್ ಪ್ರಧಾನಿ ಕೀರ್ ಸ್ಟಾರ್ಮರ್ ಆಹ್ವಾನದ ಮೇರೆಗೆ ಪ್ರಧಾನಿ ಬ್ರಿಟನ್‌ಗೆ ಭೇಟಿ ನೀಡಲಿದ್ದು, ಭಾರತ-ಬ್ರಿಟನ್ ದ್ವಿಪಕ್ಷೀಯ ಸಂಬಂಧಗಳ ಕುರಿತು ಚರ್ಚೆ ನಡೆಸಲಿದ್ದಾರೆ. ಜೊತೆಗೆ ಪರಸ್ಪರ ಹಿತಾಸಕ್ತಿಯ ಪ್ರಾದೇಶಿಕ ಮತ್ತು ಜಾಗತಿಕ

ವಿಷಯಗಳ ಕುರಿತು ಅಭಿಪ್ರಾಯಗಳನ್ನು ವಿನಿಮಯ ಮಾಡಿಕೊಳ್ಳಲಿದ್ದಾರೆ. ಇದೇ ಸಂದರ್ಭ ಪ್ರಧಾನಿ, ಬ್ರಿಟನ್ ದೊರೆ ಮೂರನೇ ಚಾರ್ಲ್ಸ್ ಅವರನ್ನು ಭೇಟಿ ಮಾಡುವ ನಿರೀಕ್ಷೆಯಿದೆ. ಭೇಟಿಯ ವೇಳೆ ವ್ಯಾಪಾರ ಮತ್ತು ಆರ್ಥಿಕತೆ, ತಂತ್ರಜ್ಞಾನ ಮತ್ತು ನಾವೀನ್ಯತೆ, ರಕ್ಷಣೆ ಮತ್ತು ಭದ್ರತೆ, ಹವಾಮಾನ, ಆರೋಗ್ಯ, ಶಿಕ್ಷಣ ಮತ್ತು ಜನರಿಂದ ಜನರ ನಡುವಿನ ಸಂಬಂಧಗಳು ಸೇರಿದಂತೆ ಸಮಗ್ರ ಕಾರ್ಯತಂತ್ರದ ಪಾಲುದಾರಿಕೆಯ ಪ್ರಗತಿಯನ್ನು ಪರಿಶೀಲಿಸುವ ಸಾಧ್ಯತೆಯಿದೆ. ಇನ್ನು ಎರಡನೇ ಚರಣದಲ್ಲಿ, ಮಾಲ್ಡೀವ್ಸ್ ಅಧ್ಯಕ್ಷ ಡಾ.ಮೊಹಮ್ಮದ್ ಮುಯಿಝು ಆಹ್ವಾನದ ಮೇರೆಗೆ ಇದೇ ೨೫ ರಿಂದ ಎರಡು ದಿನಗಳ ಕಾಲ ಪ್ರಧಾನಿ ಮಾಲ್ಡೀವ್ಸ್‌ಗೆ ಭೇಟಿ ನೀಡಲಿದ್ದಾರೆ. ಮಾಲ್ಡೀವ್ಸ್‌ನ ೬೦ನೇ ಸ್ವಾತಂತ್ರ್ಯೋತ್ಸವದ ಆಚರಣೆಯಲ್ಲಿ 'ಗೌರವ ಅತಿಥಿ'ಯಾಗಿ ಪ್ರಧಾನಿ ನರೇಂದ್ರ ಮೋದಿ ಭಾಗವಹಿಸಲಿದ್ದಾರೆ. ಭೇಟಿಯ ಸಮಯದಲ್ಲಿ, ವಿವಿಧ ಆಸಕ್ತಿಯ ವಿಷಯಗಳ ಕುರಿತು ಚರ್ಚೆ ನಡೆಸಲಿದ್ದು, 'ಸಮಗ್ರ ಆರ್ಥಿಕ ಮತ್ತು ಕಡಲ ಭದ್ರತಾ ಪಾಲುದಾರಿಕೆ'ಗಾಗಿ ಭಾರತ-ಮಾಲ್ಡೀವ್ಸ್ ಜಂಟಿ ಉಪಕ್ರಮದ ಅನುಷ್ಠಾನದಲ್ಲಿನ ಪ್ರಗತಿಯನ್ನು ಉಭಯ ನಾಯಕರು ಪರಿಶೀಲಿಸಲಿದ್ದಾರೆ.

><><><><><><><><><><

ಅಹಮದಾಬಾದ್ ವಿಮಾನ ಅಪಘಾತಕ್ಕೆ ಸಂಬಂಧಿಸಿದಂತೆ ವಿಮಾನ ಅಪಘಾತ ತನಿಖಾ ಸಂಸ್ಥೆ - ಎಎಐಬಿ ಯ ಆರಂಭಿಕ ವರದಿಯನ್ನು ಆಧರಿಸಿ ಯಾವುದೇ ತೀರ್ಮಾನಗಳಿಗೆ ಧಾವಿಸುವುದು ಅವಿವೇಕತನ ಎಂದು ಕೇಂದ್ರ ನಾಗರಿಕ ವಿಮಾನಯಾನ ಸಚಿವ ರಾಮ್ ಮೋಹನ್ ನಾಯ್ಡು ಕಿಂಜರಪು ಹೇಳಿದ್ದಾರೆ. ಗಾಜಿಯಾಬಾದ್‌ನ ಹಿಂಡನ್ ಸಿವಿಲ್ ಟರ್ಮಿನಲ್‌ನಿಂದ ಹತ್ತು ಹೊಸ ವಾಣಿಜ್ಯ ವಿಮಾನಗಳನ್ನು ಉದ್ಘಾಟಿಸಿ ಮಾತನಾಡಿದ ಅವರು, ಅಂತಿಮ ವರದಿ ಹೊರಬರುವವರೆಗೆ ಯಾವುದೇ ಹೇಳಿಕೆಗಳನ್ನು ನೀಡುವುದು ಉತ್ತಮವಲ್ಲ ಎಂದು ಪಾಶ್ಚಿಮಾತ್ಯ ಮಾಧ್ಯಮಗಳನ್ನು ತರಾಟೆಗೆ ತೆಗೆದುಕೊಂಡರು. ಭಾರತದಲ್ಲಿಯೇ ಕಪ್ಪು ಪೆಟ್ಟಿಗೆಯನ್ನು ಡಿಕೋಡ್ ಮಾಡಿದ್ದಕ್ಕಾಗಿ ಅವರು ಎಎಐಬಿ ಅನ್ನು ಶ್ಲಾಘಿಸಿದರು. ಹಿಂಡನ್ ಟರ್ಮಿನಲ್‌ನಿಂದ ದೇಶದ ಹತ್ತು ಪ್ರಮುಖ ನಗರಗಳಾದ ಬೆಂಗಳೂರು, ಕೋಲ್ಕತ್ತಾ, ವಾರಣಾಸಿ, ಇಂದೋರ್, ಚೆನ್ನೈ, ಅಹಮದಾಬಾದ್, ಪಾಟ್ನಾ, ಗೋವಾ ಮತ್ತು ಮುಂಬೈನಗರಗಳಿಗೆ ನೇರ ವಿಮಾನ ಸೇವೆ ಪ್ರಾರಂಭವಾಗಿದೆ.

><><><><><><><><><><

ಆಪರೇಷನ್ ಸಿಂಧೂರ್ ಕಾರ್ಯಾಚರಣೆಯ ಸಂದರ್ಭ ಭಾರತೀಯ ಸೈನಿಕರಿಗೆ ಅಗತ್ಯ ಆಹಾರ ವಸ್ತುಗಳನ್ನು ಪೂರೈಸಿ ಸಹಕರಿಸುತ್ತಿದ್ದ ಪಂಜಾಬ್ ನ ಬಾಲಕ ಸ್ವರ್ಣ್‌ಸಿಂಗ್‌ನ ಎಲ್ಲಾ ಶೈಕ್ಷಣಿಕ ಅಗತ್ಯತೆಗಳನ್ನು ಪ್ರಾಯೋಜಿಸಲು ಭಾರತೀಯ ಸೇನೆಯು ನಿರ್ಧರಿಸಿದೆ. ಫಿರೋಜ್ ಪುರದ ೧೦ ವರ್ಷದ ಬಾಲಕ ಕಾರ್ಯಾಚರಣೆಯ ಸಮಯದಲ್ಲಿ, ಗಡಿ ಜಿಲ್ಲೆಯ ತನ್ನ ಹೊಲಗಳಲ್ಲಿ ನಿಯೋಜಿಸಲಾದ ಸೈನಿಕರಿಗೆ ಹಗಲು-ರಾತ್ರಿ, ಅಗತ್ಯ ಆಹಾರ ಪದಾರ್ಥಗಳನ್ನು ಒದಗಿಸಿದ್ದ.

><><><><><><><><><><

ಪ್ರವಾಸೋದ್ಯಮ, ಯುವ ಸಬಲೀಕರಣ, ಮಹಿಳಾ ನೇತೃತ್ವದ ಸ್ವಸಹಾಯ ಗುಂಪುಗಳು, ಪ್ರಧಾನ ಮಂತ್ರಿ ಸೂರ್ಯಘರ್ ಮುಫ್ತ್ ಬಿಜ್ಲಿ ಯೋಜನೆ ಮತ್ತು ವೈಬ್ರೆಂಟ್ ವಿಲೇಜ್ ಕಾರ್ಯಕ್ರಮದಂತಹ ಉಪಕ್ರಮಗಳಿಂದ ಮೇಘಾಲಯದ ಗಮನಾರ್ಹ ಪರಿವರ್ತನೆಯನ್ನು ತೋರಿಸುವ ಲೇಖನವನ್ನು ಪ್ರಧಾನಿ ನರೇಂದ್ರ ಮೋದಿ ಇಂದು ಹಂಚಿಕೊಂಡಿದ್ದಾರೆ.  ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರ ಎಕ್ಸ್ ಖಾತೆಯಲ್ಲಿ ನ ಪೋಸ್ಟ್‌ಗೆ ಪ್ರತಿಕ್ರಿಯಿಸಿರುವ ಅವರು, ಮೇಘಾಲಯ ಹೆಚ್ಚಿನ ಸರ್ಕಾರಿ ಬೆಂಬಲ ಮತ್ತು ರೋಮಾಂಚಕ ಸಮುದಾಯ ಮನೋಭಾವದೊಂದಿಗೆ ಸ್ಥಿತಿಸ್ಥಾಪಕ ಮತ್ತು ಸ್ವಾವಲಂಬಿ ಭಾರತಕ್ಕೆ ನೀಲನಕ್ಷೆಯಾಗಿ ನಿಂತಿದೆ ಎಂದು ಹೇಳಿದರು.

><><><><><><><><

ಹಿಮಾಚಲ ಪ್ರದೇಶದಲ್ಲಿ ನೈಸರ್ಗಿಕ ವಿಕೋಪಗಳ ತೀವ್ರತೆಯನ್ನು ಗಮನದಲ್ಲಿಟ್ಟುಕೊಂಡು ಬಹು-ವಲಯ ಕೇಂದ್ರ ತಂಡವನ್ನು ರಚಿಸಲು ಕೇಂದ್ರ ಗೃಹ ಸಚಿವ ಅಮಿತ್ ಶಾ ನಿರ್ದೇಶನ ನೀಡಿದ್ದಾರೆ. ಕೇಂದ್ರ ತಂಡವು ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರ, ರೂರ್ಕಿಯ ಕೇಂದ್ರ ಕಟ್ಟಡ ಸಂಶೋಧನಾ ಸಂಸ್ಥೆ, ಪುಣೆಯ ಭಾರತೀಯ ಉಷ್ಣವಲಯದ ಹವಾಮಾನಶಾಸ್ತ್ರ ಸಂಸ್ಥೆ, ಭೂವಿಜ್ಞಾನಿ ಮತ್ತು ಭಾರತೀಯ ತಂತ್ರಜ್ಞಾನ ಸಂಸ್ಥೆ, ಇಂದೋರ್‌ನ ತಜ್ಞರನ್ನು ಒಳಗೊಂಡಿರುತ್ತದೆ.

><><><><><><><><

ಪೋರ್ಚ್‌ಗಲ್ ಕ್ರೀಡಾಕೂಟದ ಲಾಂಗ್ ಜಂಪ್ ಸ್ಪರ್ಧೆಯಲ್ಲಿ ಭಾರತದ ಮುರುಳಿ ಶ್ರೀಶಂಕರ್ ಸ್ವರ್ಣ ಪದಕ ಗೆದ್ದಿದ್ದಾರೆ. ಪೋರ್ಚುಗಲ್‌ನಲ್ಲಿ ನಿನ್ನೆ ರಾತ್ರಿ ನಡೆದ ವಿಶ್ವ ಅಥ್ಲೆಟಿಕ್ಸ್ ಕಾಂಟಿನೆಂಟಲ್ ಟೂರ್ನಿಯ ಕಂಚಿನ ಮಟ್ಟದ ಕ್ರೀಡಾಕೂಟದ ಸ್ಪರ್ಧೆಯಲ್ಲಿ ಮುರುಳಿ ೭.೭೫ ಮೀಟರ್ ಜಿಗಿತದೊಂದಿಗೆ ಪ್ರಥಮ ಸ್ಥಾನ ಪಡೆದಿದ್ದಾರೆ. ಪೋಲ್ಯಾಂಡ್‌ನ ಪಿಯೋಟರ್ ಟಕೋರ್ವಿಸ್ಕಿ ದ್ವಿತೀಯ ಸ್ಥಾನ ಪಡೆದಿದ್ದು, ಆಸ್ಟ್ರೇಲಿಯಾದ ಕ್ರಿಸ್ ಮಿಟ್ರೆವಿಸ್ಕಿ ಮೂರನೇ ಸ್ಥಾನ ಪಡೆದಿದ್ದಾರೆ.

><><><><><><><><